## ಕರ್ನಾಟಕ ವಿಧಾನ ಪರಿಷತ್ತು

1. ಮಾನ್ಯ ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 814
3. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು
4. ಉತ್ತರಿಸುವ ದಿನಾಂಕ : 10.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಬೆಳೆದ ಕಬ್ಬನ್ನು ಹೊರ ರಾಜ್ಯಗಳ ಕಾರ್ಖಾನೆಗಳಿಗೆ ಸಾಗಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಸರ್ಕಾರದ ಗಮನಕ್ಕೆ ಬಂದಿದೆ.<br>ಕಬ್ಬು ನಿಯಂತ್ರಣ ಆದೇಶ 1966 ಮತ್ತು ಕರ್ನಾಟಕ ಕಬ್ಬು(ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ರನ್ವಯ ರಾಜ್ಯ ಸರ್ಕಾರವು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಮಾಡುತ್ತದೆ. ಅದರಂತೆ ಒಂದು ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರದ ಕಬ್ಬನ್ನು ಮತ್ತೊಂದು ಸಕ್ಕರೆ ಕಾರ್ಖಾನೆಯು ಪರಭಾರೆ ಮಾಡಲು ಅವಕಾಶ ಇರುವುದಿಲ್ಲ.<br><br>ರಾಜ್ಯದ ಗಡಿಭಾಗದಲ್ಲಿರುವ ಕೆಲವೊಂದು ಸಕ್ಕರೆ ಕಾರ್ಖಾನೆಗಳು ಬಹುರಾಜ್ಯ ಕಾಯ್ದೆಯಡಿಯಲ್ಲಿ ನೋಂದಣಿಗೊಂಡಿದ್ದು, ಈ ಕಾರ್ಖಾನೆಗಳು ಹೊರರಾಜ್ಯದ ಕಬ್ಬು ಬೆಳೆಗಾರರ ರೈತರನ್ನು ಷೇರುದಾರ ಸದಸ್ಯರನ್ನಾಗಿ ಮಾಡಿಕೊಂಡಿರುತ್ತವೆ. ಇದರಿಂದ ಹೊರ ರಾಜ್ಯದ ಕಬ್ಬು ಬೆಳೆಗಾರ ರೈತರು ನಮ್ಮ ರಾಜ್ಯದ ಕಾರ್ಖಾನೆಗಳಿಗೂ ಹಾಗೂ ಇಲ್ಲಿನ ರೈತರು ಹೊರ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೂ ಕಬ್ಬನ್ನು ಸರಬರಾಜು ಮಾಡುತ್ತಿರುವುದು ಗಮನಿಸಬಹುದಾಗಿದೆ.<br><br>ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಹಂಚಿಕೆ ಮಾಡಿದ್ದ ಕಬ್ಬು ಮೀಸಲು ಕ್ಷೇತ್ರದಿಂದ ಹೊರರಾಜ್ಯದ ಸಕ್ಕರೆ ಕಾರ್ಖಾನೆಗಳು ಪರಭಾರೆ ಮಾಡುವ ದೂರುಗಳು ಬಂದಲ್ಲಿ ಸಂಬಂಧಪಟ್ಟ ಗಡಿಭಾಗದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಇಂತಹ ಕಾನೂನು ಬಾಹಿರ ಕಬ್ಬಿನ ಪರಭಾರೆಯನ್ನು ತಡೆಯಲು ಸೂಚಿಸಲಾಗುತ್ತದೆ. ಅದರಂತೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ. |

| | | |
|---|---|---|
| (ಆ) | ಹೊರ ರಾಜ್ಯಗಳಿಗೆ ರವಾನೆ ಮಾಡಲಾಗುತ್ತಿರುವ ಕಬ್ಬುಗಳು ಯಾವ ಕಾರ್ಖಾನೆಗೆ ರವಾನೆಯಾಗುತ್ತಿದೆ ಮತ್ತು ಅವರು ನೀಡುತ್ತಿರುವ ನಿಗದಿತ ದರ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು); | ರಾಜ್ಯದ ಕಬ್ಬು ಬೆಳೆಗಾರರು ಕಬ್ಬನ್ನು ಸರಬರಾಜು ಮಾಡುತ್ತಿರುವ ಹೊರ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮತ್ತು ಅವುಗಳು ನೀಡುತ್ತಿರುವ ದರದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಇ) | ಹೊರ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಬೆಳೆಗೆ ಕರ್ನಾಟಕ ರಾಜ್ಯಕ್ಕಿಂತ ದರ ಹೆಚ್ಚಿರುವುದರ ಬಗ್ಗೆ ಸರ್ಕಾರ ಅಧ್ಯಯನ ಮಾಡುತ್ತಿದೆಯೇ; ಮಾಡಿದ್ದಲ್ಲಿ ಯಾವ ರೀತಿ ಅಧ್ಯಯನ ಮಾಡಲಾಗುತ್ತಿದೆ; | ಕೇಂದ್ರ ಸರ್ಕಾರವು ಕಬ್ಬಿಗೆ ನಿಗದಿಪಡಿಸುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯು (FRP) ದೇಶಾದ್ಯಂತ ಏಕರೂಪವಾಗಿರುತ್ತದೆ. ದೇಶದಲ್ಲಿ ಕಬ್ಬು ಮತ್ತು ಸಕ್ಕರೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಮಹಾರಾಷ್ಟ್ರ ರಾಜ್ಯದಲ್ಲಿ ರಾಜ್ಯ ಸಲಹಾ ಬೆಲೆ ಇರುವುದಿಲ್ಲ. ಇದೇ ಮಾದರಿಯನ್ನು ಕರ್ನಾಟಕ ರಾಜ್ಯದಲ್ಲಿಯೂ ಸಹ ಅಳವಡಿಸಿಕೊಳ್ಳಲಾಗಿದೆ.<br><br>ಸಕ್ಕರೆ ಕಾರ್ಖಾನೆಗಳ ಸರಾಸರಿ ಇಳುವರಿ ಆಧಾರದ ಮೇಲೆ ಕಬ್ಬಿನ ಬೆಲೆಯನ್ನು ನಿರ್ಧರಿಸಲಾಗುತ್ತದೆ. ಆದ್ದರಿಂದ, ಆಯಾಯ ಸಕ್ಕರೆ ಕಾರ್ಖಾನೆಗಳು ಪಡೆಯುವ ಇಳುವರಿ ಆಧಾರದ ಮೇಲೆ ಪ್ರತಿ ಕಾರ್ಖಾನೆಗೆ ದರ ನಿಗಧಿಯಾಗುವುದರಿಂದ ರಾಜ್ಯದಿಂದ ರಾಜ್ಯಕ್ಕೆ ಕಾರ್ಖಾನೆಯಿಂದ ಕಾರ್ಖಾನೆಗೆ ಕಬ್ಬಿನ ದರಗಳಲ್ಲಿ ವ್ಯತ್ಯಾಸವಿರುತ್ತದೆ. ಈ ಕುರಿತು ಅಧ್ಯಯನ ನಡೆಸುವ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ. |
| (ಈ) | ಕರ್ನಾಟಕ ಗಡಿ ಭಾಗದಲ್ಲಿ ಹೊಂದಿಕೊಂಡಿರುವ ಸಕ್ಕರೆ ಕಾರ್ಖಾನೆಗಳು ನಿಗದಿ ಪಡಿಸಿರುವ ದರದ ವಿವರ ನೀಡುವುದು; ಮತ್ತು (ಮಹಾರಾಷ್ಟ್ರ, ತೆಲಂಗಾಣ ಮತ್ತು ಆಂಧ್ರಪ್ರದೇಶ) ಹೊರ ರಾಜ್ಯದಲ್ಲಿ ನಿಗದಿ ಪಡಿಸಿರುವ ದರವನ್ನು ನೀಡುವುದು? | ಕರ್ನಾಟಕ ಗಡಿ ಭಾಗದಲ್ಲಿ ಹೊಂದಿಕೊಂಡಿರುವ ಸಕ್ಕರೆ ಕಾರ್ಖಾನೆಗಳು ನಿಗದಿಪಡಿಸಿರುವ ದರದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br><br>ರಾಜ್ಯದ ಕಬ್ಬು ಬೆಳೆಗಾರರು ಕಬ್ಬನ್ನು ಸರಬರಾಜು ಮಾಡುತ್ತಿರುವ ಹೊರ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮತ್ತು ಅವುಗಳು ನೀಡುತ್ತಿರುವ ದರದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |

ಸಂಖ್ಯೆ: ಸಿಐ 97 ಎಸ್‌ಜಿಎಫ್ 2026

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 740(814)ಕ್ಕೆ ಅನುಬಂಧ-1**

ರಾಜ್ಯದ ಕಬ್ಬು ಬೆಳೆಗಾರರು ಕಬ್ಬನ್ನು ಸರಬರಾಜು ಮಾಡುತ್ತಿರುವ ಹೊರ ರಾಜ್ಯದ ಸಕ್ಕರೆ ಕಾರ್ಖಾನೆಗಳು ಮತ್ತು ಅವುಗಳು ಪ್ರತಿ ಮೆ.ಟನ್ ಕಬ್ಬಿಗೆ ನೀಡುತ್ತಿರುವ ದರದ ವಿವರಗಳು.

| ಕ್ರ. ಸಂ. | ಕಾರ್ಖಾನೆಯ ಹೆಸರು | ನೀಡುತ್ತಿರುವ ನಿಗದಿತ ದರ ಪ್ರತಿ ಮೆ.ಟನ್ ಗೆ (ರೂ.ಗಳಲ್ಲಿ) (ಕಟಾವು & ಸಾಗಾಣಿಕೆ ವೆಚ್ಚ ಸೇರಿದಂತೆ) |
|---|---|---|
| 1 | ಶ್ರೀ ಛತ್ರಪತಿ ಶಾಹು ಎಸ್.ಎಸ್.ಕೆ. ಲಿಮಿಟೆಡ್, ಕಾಗಲ್, ಮಹಾರಾಷ್ಟ್ರ | 4325.04 |
| 2 | ಸರ ಸೈನಾಪತಿ ಸಂತಾಜಿ ಘೋರ್ಪಡೆ ಶುಗರ್ ಫ್ಯಾಕ್ಟರಿ ಲಿಮಿಟೆಡ್, ಮಹಾರಾಷ್ಟ್ರ | 4403.58 |
| 3 | ಲೋಕನಾಯಕ ಸದಾಶಿವರಾವ್ ಮಂಡ್ಲಿಕ್ ಕಾಗಲ್ ತಾಲೂಕು ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಮಹಾರಾಷ್ಟ್ರ | 4321.93 |
| 4 | ಶ್ರೀ ದುಧಗಂಗಾ ವೇದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಮಹಾರಾಷ್ಟ್ರ | 4402.89 |
| 5 | ಶ್ರೀ ಭೋಗಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಮಹಾರಾಷ್ಟ್ರ | 4415.69 |
| 6 | ಕಲ್ಲಪ್ಪಣ್ಣ ಅವಳೇ ಜವಾಹಿರ ಶೆಟ್ಕಾರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಮಹಾರಾಷ್ಟ್ರ | 4207.4 |
| 7 | ಶ್ರೀ ದತ್ತಾ ಶೆಕ್ಕರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಮಹಾರಾಷ್ಟ್ರ | 4255.84 |
| 8 | ಅಥಣಿ ಶುಗರ್ಸ್ ಲಿಮಿಟೆಡ್ (ಇಂದಿರಾ ಗಾಂಧಿ ಭಾರತೀಯ ಮಹಿಳಾ ಅಭಿವೃದ್ದಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್), ಮಹಾರಾಷ್ಟ್ರ | 4103.60 |
| 9 | ಲೋಕ ಮಂಗಲ ಬಂಡರಕವಟೆ ತಾದ. ಸೋಲಾಪುರ, ಮಹಾರಾಷ್ಟ್ರ | 4000.00 |
| 10 | ಸಿದ್ದನಾಥ ಕಾರ್ಖಾನತಿರ ತಾ:ದ.ಸೋಲಾಪುರ, ಮಹಾರಾಷ್ಟ್ರ | 4000.00 |
| 11 | ಲೋಕಶಕ್ತಿ ಕಾರ್ಖಾನೆ ಅವರಾದ. ತಾ:ದ.ಸೋಲಾಪುರ, ಮಹಾರಾಷ್ಟ್ರ | 3850.00 |
| 12 | ಸಿದ್ದೇಶ್ವರ ಕಾರ್ಖಾನೆ ಕುಮಟಾ ತಾ:ಸೋಲಾಪುರ, ಮಹಾರಾಷ್ಟ್ರ | 4000.00 |
| 13 | ಜೈಹಿಂದ್ ಅಚ್ಚಗಾಂವ ತಾ:ಸೋಲಾಪೂರ, ಮಹಾರಾಷ್ಟ್ರ | 3900.00 |
| 14 | ಗೋಕುಲ ಕೊರಸೆಗಾಂವ ಸಾ:ಸೋಲಾಪುರ, ಮಹಾರಾಷ್ಟ್ರ | 3900.00 |
| 15 | ಜಕರಾಯ ಕಾರ್ಖಾನೆ, ಏಣಕಿ ತಾ:ಮೋಳ, ಮಹಾರಾಷ್ಟ್ರ | 3900.00 |
| 16 | ಸೀತಾರಾಮ ಕಾರ್ಖಾನೆ, ಖರಡಿ ತಾ:ಪಂಡರಪೂರ, ಮಹಾರಾಷ್ಟ್ರ | 4700.00 |

| | | |
|---|---|---|
| 17 | ಅವತಾಡೆ ಕಾರ್ಖಾನೆ, ನಂದೂರ ತಾ:ಮಂಗಳನೇಡೆ, ಮಹಾರಾಷ್ಟ್ರ | 4000.00 |
| 18 | ಭೈರವನಾಥ ಆವಂಗಿ, ತಾ:ಮಂಗಳವೇಡೆ, ಮಹಾರಾಷ್ಟ್ರ | 4000.00 |
| 19 | ಓಂಕಾರ ಕಾರ್ಖಾನೆ, ಮಂಗಳೂರ. ತಾ:ಅಕ್ಕಲಕೋಟ, ಮಹಾರಾಷ್ಟ್ರ | 3900.00 |
| 20 | ವಿಲಾಸ ಸಹಕಾರಿ ಸಾಖರ ಕಾರಖಾನಾ ಉದಗೀರ್, ಲಾತೂರ್, ಮಹಾರಾಷ್ಟ್ರ | 3150.00 |
| 21 | ಜಾಗೃತಿ ಶುಗರ್ಸ್ ತಳೇಗಾಂವ, ಲಾತೂರ್ , ಮಹಾರಾಷ್ಟ್ರ | 3150.00 |
| 22 | ಹನುಮಾನ ಖಂಡಸಾರಿ, ಮಹಾರಾಷ್ಟ್ರ | 2700.00 |
| 23 | ಸಿದ್ಧಿ ಶುಗರ್ ಅಹಮದ್‌ಪುರ, ಮಹಾರಾಷ್ಟ್ರ | 2900.00 |
| 24 | ಶಿವಾಜಿ ಶುಗರ್ ಬರೇಲಿ, ಮಹಾರಾಷ್ಟ್ರ | 2650.00 |
| 25 | ಟ್ವೆಂಟಿ ಒನ್ ಶುಗರ್ಸ್ ಲಾತೂರ್ , ಮಹಾರಾಷ್ಟ್ರ | 3150.00 |
| 26 | ವಿಠಲ ಸಾಯಿ ಮುರುಮ್ , ಮಹಾರಾಷ್ಟ್ರ | 2800.00 |
| 27 | ಓಂಕಾರ ಶುಗರ್ಸ್ ನಿಲಂಗಾ, ಮಹಾರಾಷ್ಟ್ರ | 2900.00 |
| 28 | ಗಾಯತ್ರಿ ಶುಗರ್-2 ಮಾಗಿ, ತೆಲಂಗಾಣ | 2900.00 |
| 29 | ಗಟಪತಿ ಶುಗರ್ ಸಂಗಾರೆಡ್ಡಿ, ತೆಲಂಗಾಣ | 2900.00 |
| 30 | ಗೋದಾವರಿ ಜಹೀರಾಬಾದ್ , ತೆಲಂಗಾಣ | 2900.00 |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ

ಸಕ್ಕರೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 740(814)ಕ್ಕೆ ಅನುಬಂಧ-2

2025-26 ನೇ ಹಂಗಾಮಿನಲ್ಲಿ ಕರ್ನಾಟಕ ಗಡಿ ಭಾಗದಲ್ಲಿ ಹೊಂದಿಕೊಂಡಿರುವ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ.ಟನ್ ಕಬ್ಬಿಗೆ ನೀಡುತ್ತಿರುವ ಬೆಲೆಯ ವಿವರಗಳು

| SL. NO | NAME OF THE FACTORIES | Actual cane rate declared by factories to farmers (Rs./MT) | Actual Rate as per Factory Declaration Includes H&T (Rs./MT) |
|---|---|---|---|
| | **BELAGAVI DISTRICT** | | |
| 1 | ARIHANT SUGARS INDUSTRIESS LTD, JAINAPUR, CHIKODI TALUK.,BELAGAVI DIST. | 3250 | 4065 |
| 2 | CHIDANAND BASAPRABHU KORE SSK LTD., CHIKKODI TALUK.BELAGAVI DIST. | 3250 | 4042 |
| 3 | VENKATESWARA POWER PROJECT LTD., CHIKKODI TALUK.BELAGAVI DIST. | 3250 | 4361 |
| 4 | RENUKA SUGAR S LTD.,BURLATTI, ATHANI TALUK.BELGAUM DIST | 3250 | 4175 |
| 5 | KRISHNA SSK LTD., ATHANI TALUK.BELAGAVI DIST. | 3250 | 3841 |
| 8 | SRI BASAVESHAWARA SUGARS LTD BALLIGERI TALUK:ATHANI DISTRICT: BELAGAVI | 3250 | 4150 |
| 7 | ATHANI SUGAR LTD., AHTANI TALUK.BELAGAVI DIST. | 3250 | 4215 |
| 8 | UGAR SUGARS LTD., UGARKURD, AHTANI TALUK.BELAGAVI DIST. | 3250 | 4100 |
| 9 | SHIRAGUPPI SUGAR WORKS LTD., KHANAPUR ROAD,BELAGAVI DIST | 3250 | 4133 |
| 10 | HALASIDANATHA SSK LTD., NIPPANI TALUK.BELAGAVI DIST. | 3310 | 4210 |
| 11 | HIRANYAKESHI SSK LTD., HUKKERI TALUK.BELAGAVI DIST. | 3250 | 4310 |
| 12 | VISHWARAJ SUGARS LTD., HUKKERI TALUK.BELAGAVI DIST. | 3250 | 4160 |
| 13 | SANGAM SSK N., HIDIKAL DAM, HUKKERI TALUK,BELAGAVI DIST. | 3250 | 4188 |
| 14 | RENUKA SUGARS (LESSEE OF Raibagh SSK Ltd.), Raibagh TALUK, BELAGAVI DISTRICT | 3250 | 4175 |
| 15 | ICPL- ALAGAWADI BIRESWARA SUGARS, ALAGAWADI, RAIBAG TALUK, BELAGAVI DISTRICT. | 3250 | 4150 |
| 16 | SHIVASHAKTI SUGARS LTD., RAIBAG TALUK.BELAGAVI DIST. | 3250 | 4150 |
| | **BIDAR DISTRICT** | | |
| 17 | BHALKESHWAR SUGARS LTD, BAJOLAGA, BHALKI TALUK., BIDAR DIST. | 3250 | 3926 |

| | | | |
|---|---|---|---|
| 18 | MAHATHMA GANDHI SSK LTD., BHALKI TALUK. BIDAR DIST. | 3250 | 3867 |
| | **KALABURGI DISTRICT** | | |
| 19 | NSL SUGARS (LESSEE OF ALAND SSK ) BHOOSANUR, KALABURGI DISTRICT | 3250 | 3900 |
| | **VIJAYAPURA DISTRICT** | | |
| 20 | SHRI DUTT INDIA PRIVATE LTD. INDI TALUK. VIJAYAPURA DISTRICT | 3250 | 3923 |
| 21 | JAMKHANDI SUGARS LTD., UNIT-2, NAD KD, INDI TALUK, VIJAYAPURA DISTRICT | 3250 | 3900 |
| 22 | ICPL-DNAYANYOGI SHRI SHIVAKUMAR SWAMIJI SUGARS, HIREBEVANURU, INDI TALUK, VIJAYAPURA DISTRICT. | 3250 | 3850 |
| 23 | SHREE BHIMASHANKAR SAHAKARI SAKKARE KARKHANE NIYAMIT, MARGUR, INDI TALUK, VIJAYAPUR DIST. | 3250 | 3900 |
| 24 | KPR SUGAR MILL PVT LTD., SINDAGI TALUK, VIJAYAPURA DISTRICT | 3250 | 3850 |
| 25 | SANGAMNATH SUGARS LTD.,YERAGAL B. K, SINDAGI TALUK, VIJAYAPURA DIST. | 3250 | 3850 |

**ಷರಾ: ಸರ್ಕಾರದ ಆದೇಶ ಸಂಖ್ಯೆ ಸಿಐ ಎಸ್‌ಜಿಎಫ್/2024 2025-26 ದಿನಾಂಕ: 08.11.2025 ರನ್ವಯ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ರಾಜ್ಯ ವ್ಯಾಪ್ತಿಯ ಕಬ್ಬಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ರೂ.50/- ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಹೆಚ್ಚುವರಿ ರೂ.50/- ಗಳನ್ನು ಎರಡನೇ ಕಂತಿನ ರೂಪದಲ್ಲಿ ಪಾವತಿಸಲು ಆದೇಶಿಸಲಾಗಿದೆ.**
**1) ಶೇ10.25 ಸಕ್ಕರೆ ಇಳುವರಿಗೆ ರೂ.3200/- (ರೂ.3150 ಕಾರ್ಖಾನೆಗಳಿಂದ + ರೂ.50/- ಸರ್ಕಾರದ ವತಿಯಿಂದ)**
**2) ಶೇ11.25 ಸಕ್ಕರೆ ಇಳುವರಿಗೆ ರೂ.3300/- (ರೂ.3250 ಕಾರ್ಖಾನೆಗಳಿಂದ + ರೂ.50/- ಸರ್ಕಾರದ ವತಿಯಿಂದ)**
**3) ಶೇ10.25 - 9.5 ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.**
**4) ಶೇ 11.25 - 10.25 ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.**

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು